**ದಿಃ 14-9-2021 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಶ್ರೀ ಕೆ ಇ ಎಂ ವಕೀಲರಿಂದಃ**

ನಾನು ಯಾವುದೇ ವಿದ್ಯಾಭ್ಯಾಸ ಮಾಡಿಲ್ಲ. ನನ್ನ ತಂದೆ ಕೆಂಚಪ್ಪನಿಗೆ ಮೂರು ಜನ ಮಕ್ಕಳು. ಮೊದಲನೆಯವರು ಸಿದ್ದಮ್ಮ, ಎರಡನೆಯವರು ಸಿದ್ದಯ್ಯ, ಮೂರನೇಯವಳು ನಾನು ಕೆಂಚಮ್ಮ. 06-04-1999 ರಲ್ಲಿ ನನ್ನ ತಂದೆ ತೀರಿಕೊಂಡಿರುತ್ತಾರೆ. ನನ್ನ ತಂದೆ ತೀರಿಕೊಂಡಾಗ ನಮ್ಮಗೆಲ್ಲಾ ಮದುವೆಯಾಗಿತ್ತು. 1978 ರಲ್ಲಿ ನಮ್ಮ ಮದುವೆಯಾಗಿರುತ್ತದೆ. ನನ್ನ ತಂದೆ ತೀರಿಕೊಂಡಾಗ ಉಳಿದ ಇಬ್ಬರ ಮಕ್ಕಳ ಮದುವೆ ಕೂಡ ಆಗಿತ್ತು. ಮದುವೆಯಾದ ನಂತರ ಸಿದ್ದಮ್ಮ ತನ್ನ ಗಂಡನಮನೆಯಲ್ಲಿ ಇರಲಿಲ್ಲ. ತವರು ಮನೆಯಲ್ಲಿ ಇದ್ದರು. ನನ್ನ ಗಂಡನ ಹೆಸರು ಬಸವಲಿಂಗಪ್ಪ. ಅವರು ವ್ಯವಸಾಯ ಮಾಡುತ್ತಿದ್ದರು. ನಮ್ಮ ಮದುವೆಯಾಗಿ 4 ವರ್ಷದ ನಂತರ ಹೈಸ್ಕೂಲ್ ಶಿಕ್ಷಕರಾಗಿದ್ದರು. ಅವರಿಗೆ ಎಚ್ ಡಿ ಪುರದಲ್ಲಿ ನೇಮಕಾತಿಯಾಗಿ ನಿವೃತ್ತಿ ಕೂಡ ಅಲ್ಲಿಯೇ ಹೊಂದಿರುತ್ತಾರೆ. ಗಂಡನ ಜೊತೆಯಲ್ಲಿ ನಾನು ಎಚ್ ಡಿ ಪುರದಲ್ಲಿ ವಾಸ ಇದ್ದೇನೆ. ಪ್ರಸ್ತುತ ಹೊಸದುರ್ಗದಲ್ಲಿ ವಾಸ ಇರುತ್ತೇನೆ.

2. ನನಗೆ ಮೂರು ಜನ ಮಕ್ಕಳು. ಒಬ್ಬರು ಮನೆಯಲ್ಲಿದ್ದಾರೆ. ಇನ್ನೊಬ್ಬಳು ಶಿವಮೊಗ್ಗದಲ್ಲಿ ಮದುವೆ ಮಾಡಿಕೊಟ್ಟಿದೇಃನೆ. ಮತ್ತೊಬ್ಬಳು ಬೆಂಗಳೂರು ಕಂಪನಿಯಲ್ಲಿ ಕೆಲಸ ಮಾಡುತ್ತೇನೆ. 1978 ರಲ್ಲ ಮದುವೆಯಾದ ದಿನದಿಂದಲೂ ನನ್ನ ಗಂಡನ ಜೊತೆಯಲ್ಲಿ ನಾನು ಇದ್ದೇನೆ.

3. ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆಸ ರಿ. ಮೊದಲನೆ ಹೆಂಡತಿ ದ್ಯಾಮಕ್ಕ ಮತ್ತು ಎರಡನೆಯ ಹೆಂಡತಿ ಶಾಂತಮ್ಮ ಎಂದರೆ ಸರಿ. ಇವರಿಬ್ಬರು ಅಕ್ಕ ತಂಗಿ ಎಂದರೆ ಸರಿ. ಮೊದಲನೆಯ ಹೆಂಡತಿ ದ್ಯಾಮಕ್ಕನಿಗೆ ಮಕ್ಕಳಾಗಿಲ್ಲ ಅಂತ ಒಪ್ಪಿಗೆಯ ಮೇರೆಗೆ ಎರಡನೆಯ ಹೆಂಡತಿ ಶಾಂತಮ್ಮಳನ್ನು ಮದುವೆಯಾಗಿದ್ದು ಸದರಿ ಶಾಂತಮ್ಮನು ಮಕ್ಕಳೆ ನಾವು ವಾದಿ ಮತ್ತು ಪ್ರತಿವಾದಿ

ನಂ.1 ಮತ್ತು 2 ಎಂದರೆ ಸರಿ. ಸಿದ್ದಮ್ಮನ ಯಜಮಾನರು ಹೆಸರು ಗೊತ್ತಿಲ್ಲ. ಮತ್ತು ಆತನನ್ನು ನೋಡಿಲ್ಲ. ನಮ್ಮ ಮತ್ತು ನನ್ನ ಅಕ್ಕ ಸಿದ್ದಮ್ಮಳ ಸಂಬಂಧ ಚೆನ್ನಾಗಿಲ್ಲ. ಇಲ್ಲಿಯವರೆಗೂ ನನ್ನ ಅಕ್ಕ ಯಾರನ್ನು ಮದುವೆಯಾಗಿದ್ದಾಳೆ ಮತುತ ಯಾರನ್ನು ಜೊತೆ ಇದ್ದಾಳೆ ಅಂತ ತಿಳಿದುಕೊಂಡಿಲ್ಲ. ಆಕೆ ಮದುವೆಯಾಗಿ ಮಕ್ಕಳು ಇದ್ದಾರೆ ಅಂತ ಗೊತ್ತಿದೆ. ಸಿದ್ದಮ್ಮಳ ಗಂಡನ ಹೆಸರು ಕರಿಯಪ್ಪ ಆತನ ಊರು ಗೂಳಿಹೊಸಳ್ಳಿ ಎಂದರೆ ಸರಿ. ಸಿದ್ದಮ್ಮಳ ಮದುವೆ 1960 ರಲಿ ಆಗಿತ್ತು ಎಂದರೆ ಸರಿ. ನನ್ನ ಗಂಡನ ಸ್ವಂತ ಊರು ಹುಲಿಕೆರೆ ಎಂದರೆ ಸರಿ. ಸಿದ್ದಮ್ಮ ಮದುವೆಯಾದಾಗಿನಿಂದಲೂ ಗೂಳಿಹೊಸಳ್ಳಿ ಗ್ರಾಮದಲ್ಲಿ ಸಿದ್ದಮ್ಮ ಮತ್ತು ಆಕೆಯ ಗಂಡ ವಾಸವಾಗಿದ್ದರು ಎಂದರೆ ಸುಳ್ಳು. ಸಿದ್ದಮ್ಮ ಮದುವೆಯಾದಾಗಿನಿಂದಲೂ ಇಲ್ಲಿಯವರೆಗೆ ಕೊಳಹಾಳು ಗ್ರಾಮದಲ್ಲಿ ಇದ್ದಾರೆ. ಆಕೆ ಗಂಡನ ಮನೆಗೆ ಹೋಗಿಯೇ ಇಲ್ಲ. ಅವರು ಗಂಡನ ಮನೆಯಲ್ಲಿ ಕೊಳಹಾಳು ಗ್ರಾಮದಲ್ಲಿ ಇದ್ದಾಳೆ ಇಲ್ಲವೋ ಅಂತ ಗೊತ್ತಿಲ್ಲ. ಆಕೆ ನನ್ನ ತಮ್ಮನ ಜೊತೆಯಲ್ಲಿ ವಾಸ ಇದ್ದಾಳೆ. ನನ್ನ ಮೊದಲಿನಿಂದಲೂ ನನ್ನತಮ್ಮನ ಜೊತೆ ಇದ್ದಾಳೆ ಅಂತ ದಾಖಲೆ ಹಾಜರುಪಡಿಸಿರುತ್ತೇನೆ.

4. ನನ್ನ ತಮ್ಮ ಸಿದ್ದಯ್ಯ 1 ನೇ ಪ್ರತಿವಾದಿ ತನ್ನ ಸ್ವಂತ ಅಕ್ಕನ ಮಗಳು ಪಾರ್ವತಮ್ಮಳನ್ನು ಮದುವೆಯಾಗಿದ್ದಾರೆ. ಆತ ಈಗ ಚಿತ್ರದುರ್ಗದಲ್ಲಿದ್ದಾರೆ ಆತನಿಗೆ ನಂದಕುಮಾರ ಎಂಬ ಒಬ್ಬನೇ ಮಗನಿದ್ದಾನೆ ಎಂದರೆ ಸರಿ. ನನ್ನ ತಂದೆ ಕೆಂಚಪ್ಪನಿಗೆ ಯಾರು ಅಣ್ಣ ತಮ್ಮಂದಿರು ಇಲ್ಲ. ನನ್ನ ಅಣ್ಣ ಎಂ ಎ ಪದವಿದರರು. ಎಸ್ ಜೆ ಎಂ ಡಿಗ್ರಿ ಕಾಲೇಜ್ ನಲ್ಲಿ ಲೆಕ್ಚರ್ ಆಗಿ ನಿವೃತ್ತಿ ಹೊಂದಿದ್ದಾರೆ ಎಂದರೆ ಸರಿ. ಅವರು ಸ್ವಂತ ಮನೆ ಕಟ್ಟಿಸಿಕೊಂಡು ಚಿತ್ರದುರ್ಗದಲ್ಲಿ ವಾಸ ಇದ್ದಾರೆ ಎಂದರೆ ಸರಿ. ಆತ ಲೆಕ್ಚರ್ ಕೆಲಸ ಮಾಡುತ್ತಿರುವುದರಿಂದ ಆತನಿಗೆ ಪ್ರತ್ಯೇಕ ಸಂಬಳ ಬರುತ್ತಿತ್ತು ಎಂದರೆ ಸರಿ. ನನ್ನ ಅಕ್ಕ ಸಿದ್ದಮ್ಮ ಮದುವೆಯಾಗಿ ಮೊದಲಿಗೆ ಗಂಡನ ಮನೆಯಲ್ಲಿ 3 ವರ್ಷ ಇದ್ದರು ಎಂದರೆ ಸರಿಯಲ್ಲ. ಸಿದ್ದಮ್ಮನ ಗಂಡನ ಮನೆಯಲ್ಲಿ ಪಾಲು ವಿಭಾಗ ಆಗಿದೆ ಎಂದರೆ ಸರಿ. ಆ ಪಾಲು ವಿಭಾಗದಲ್ಲಿ ಸಿದ್ದಮ್ಮನ ಗಂಡನಿಗೆ 8 ಎಕರೆ ಜಮೀನು ಗೂಳಿಹೊಸಳ್ಳಿ ಗ್ರಾಮದಲ್ಲಿ ಅವರ ಕುಟುಂಬದ ಪಾಲು ವಿಭಾಗದಲ್ಲಿ ಸಿಗುತ್ತದೆ ಎಂದರೆ ಗೊತ್ತಿಲ್ಲ. 1963 ರಲ್ಲಿ ಪಾಲು ವಿಭಾಗ ಆದಾಗ ಸಿದ್ದಪ್ಪನ ಕುಟುಂಬದ ಸದಸ್ಯರ ಮದ್ಯೆ ಆಗಿದ್ದು ಅವರ ಕುಟುಂಬದ ಸದಸ್ಯರ ನಡುವೆ ಭಿನ್ನಾಭಿಪ್ರಾಯ

ಎರಪಟ್ಟರ್ ಆ 8 ಎಕರೆ ಜಮೀನನ್ನು ಗೂಳಿಹೊಸಳ್ಳಿಯಲ್ಲಿ ಬಿಟ್ಟು ಕೊಳಹಾಳು ಗ್ರಾಮದಲ್ಲಿ ಬಂದು ವಾಸ ಇರಲು ಪ್ರಾರಂಭಿಸಿರದು ಎಂದರೆ ಸರಿಯಲ್ಲ. ಹಾಗಾಗಿ ಕೊಳಹಾಳು ಗ್ರಾಮದಲ್ಲಿ ಅವರೇ ಪ್ರತ್ಯೇಕ ಮನೆ ಮಾಡಿಕೊಂಡು ವಾಸ ಇದ್ದಾರೆ ಎಂದರೆ ಸರಿಯಲ್ಲ.

5. ನನ್ನ ತಂದೆಯ ತಂದೆ ಹೆಸರು ಸಿದ್ದಪ್ಪ. ನನ್ನ ತಾತನ ಕುಟುಂಬದಲ್ಲಿ ಪಾಲು ವಿಭಾಗ ನನ್ನ ತಂದೆಗೆ ಅದರಲ್ಲಿ ಕೆಲವು ಆಸ್ತಿಗಳು ನನ್ನ ತಂದೆಯ ಪಾಲಿಗೆ ಬಂದಿವೆ ಎಂದರೆ ಸರಿ. ನನ್ನ ತಾತನ ಕುಟುಂಬದಿಂದ ನನ್ನ ತಂದೆಗೆ ಪಾಲು ಬಂದ ಆಸ್ತಿಗಳ ಸರ್ವೇ ನಂಬರ ಗೊತ್ತಿದೆ. ಸರ್ವೇ ನಂ.82,85,101,101,101,101,101. ಯಾವ ಯಾವ ಸರ್ವೇ ನಂಬರಿನಲ್ಲಿ ಎಷ್ಟೆಷ್ಟು ಎಕರೆ ಆಸ್ತಿ ಇದೆ ಅಂತ ಗೊತ್ತಿಲ್ಲ. ಸದರಿ ಆಸ್ತಿಗಳ ಚೆಕ್ ಬಂದಿ ಗೊತ್ತಿಲ್ಲ. ಮೇಲೆ ಹೇಳಿದ ಯಾವುದೇ ಆಸ್ತಿಗಳ ಚೆಕ್ ಬಂದಿ ಹೇಳಲು ಆಗುವುದಿಲ್ಲ. ನನ್ನ ತಾತನ ಕಡೆಯಿಂದ ನನ್ನ ತಂದೆಗೆ ಬಂದ ಜಮೀನುಗಳು ಎಲ್ಲವು ಬೆದ್ದಲು ಜಮೀನು ಎಂದರೆ ಸರಿ. ಆಗಿನ ಕಾಲದಿಂದಲೂ ನಮ್ಮ ಊರಲ್ಲಿ ಕರೆಂಟ್ ವ್ಯವಸ್ಥೆ ಇರಲಿಲ್ಲ ಎಂದರೆ ಸರಿ.

6. ನಮ್ಮ ಮದುವೆಯಾಗಿ ಗಂಡನ ಮನೆಗೆ ಹೋದ ನಂತರ ನನ್ನ ಸತ್ತ ಕಾಲಕ್ಕೆ ನಾನಾಗಲೀ ಅಥವಾ ನನ್ನ ಅಣ್ಣನಾಗಲೀ ಒಟ್ಟಿಗೆ ಇಲ್ಲ . 4 ವರ್ಷ ಮಾತ್ರ ಒಟ್ಟಿಗೆ ಇದ್ದೇವು . ಆ ಮೇಲೆ ಬಿಟ್ಟು ಬಂದೇ ಅಂತ ನುಡಿಯುತ್ತಾರೆ. 1978 ರಲ್ಲಿ ಮದುವೆಯಾಗಿದ್ದು 1982 ರ ನಂತರ ಗಂಡನ ಮನೆಗೆ ಬಂದೆನು. ಅಲ್ಲಿಂದ ಇಲ್ಲಿಯವರೆಗೂ ತವರು ಮನೆ ಮತ್ತು 1 ನೇ ಪ್ರತಿವಾದಿಯ ಜೊತೆಗೆ ಸಂಪರ್ಕ ಇಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಸಮಮ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ